MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 4-1-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಗೋಡಂಬಿ ದರ ಮುಂದಿನ ದಿನಗಳಲ್ಲಿ ಹೆಚ್ಚಳ ನಿರೀಕ್ಷೆ

ಈ ವರ್ಷ ಮುಂದಿನ ದಿನಗಳಲ್ಲಿ ಗೋಡಂಬಿ ದರ ಹೆಚ್ಚಳವಾಗುವ ನಿರೀಕ್ಷೆಯನ್ನು ಅಂತರಾಷ್ಟ್ರೀಯ ಗೋಡಂಬಿ ಉತ್ಪಾದಕರ ಸಭೆಯಲ್ಲಿ ವ್ಯಕ್ತ ಪಡಿಸಲಾಗಿದೆಯೆನ್ನಲಾಗಿದೆ. ಈ ವರ್ಷ ಗೋಡಂಬಿ ಬಳಕೆ ಗಣನೀಯ ಹೆಚ್ಚಳವಾಗಿದೆಯೆನ್ನಲಾಗಿದೆ. ಇದರಿಂದ ಮುಂದಿನ ದಿನಗಳಲ್ಲಿ ದರ ಹೆಚ್ಚಳದ ನಿರೀಕ್ಷೆಯಿದೆಯೆನ್ನಲಾಗಿದೆ. ದರ ಸ್ಥಿರತೆ ಹೊಂದಲು ವಿಯೆಟ್ನಾಂನ ಗೋಡಂಬಿ ಉತ್ಪಾದಕರು ಹಾಗೂ ಭಾರತದ ಗೋಡಂಬಿ ಉತ್ಪಾದಕರು ಪರಸ್ಪರ ಸಹಕಾರ ನೀಡಬೇಕಾಗಿದೆಯೆನ್ನಲಾಗಿದೆ ಹಾಗೂ ಮಾರುಕಟ್ಟೆಯ ಸ್ಥಿರತೆಯ ಬಗ್ಗೆ ಚರ್ಚಿಸಲಾಯಿತೆನ್ನಲಾಗಿದೆ. ಆಫ್ರಿಕಾ ದೇಶಗಳನ್ನು ಕಚ್ಚಾ ಗೋಡಂಬಿಯ ಗುಣಮಟ್ಟ ಉತ್ತಮವಿರುವಂತೆ ನೋಡಿಕೊಳ್ಳಲು ಕೇಳಿಕೊಳ್ಳಲಾಗಿದೆಯೆನ್ನಲಾಗಿದೆ. ಈ ವರ್ಷ ೪ ಮಿಲಿಯನ್ ಟನ್ ಕಚ್ಚಾ ಗೋಡಂಬಿ ಉತ್ಪಾದನೆಯಾಗುವ ನಿರೀಕ್ಷೆಯಿದೆಯೆನ್ನಲಾಗಿದ್ದು, ಇದರಲ್ಲಿ 2 ಮಿಲಿಯನ್ ಟನ್ ಆಫ್ರಿಕಾ ದೇಶಗಳಲ್ಲಿ ಉತ್ಪಾದನೆಯಾಗುವ ನಿರೀಕ್ಷೆಯಿದೆಯೆನ್ನಲಾಗಿದೆ. ಉಳಿದಂತೆ 2 ಮಿಲಿಯನ್ ಟನ್ ಭಾರತ, ವಿಯೆಟ್ನಾಂ, ಇಂಡೋನೇಶ್ಯಾ ಹಾಗೂ ಕಾಂಬೋಡಿಯಾ ಗಳಲ್ಲಿ ಉತ್ಪಾದನೆಯಾಗಬಹುದೆನ್ನಲಾಗಿದೆ. ವಿಯೆಟ್ನಾಂ ಈ ವರ್ಷ 35,0000 ಟನ್ ಗೋಡಂಬಿ ತಿರುಳು ರಫ್ತು ಮಾಡಲು ಗುರಿ ಹೊಂದಿದೆಯೆನ್ನಲಾಗಿದ್ದು, ಇದರಿಂದ 4 ಬಿಲಿಯನ್ ಯು.ಎಸ್ ಡಾಲರ್ ಗಳಿಸುವ ನಿರೀಕ್ಷೆಯಿದೆಯೆನ್ನಲಾಗಿದೆ.

## ಕಚ್ಚಾ ಗೋಡಂಬಿ ದರ ಇಳಿಕೆಯಲ್ಲಿ

ವಿಯೆಟ್ನಾಂ ನ ಕಚ್ಚಾ ಗೋಡಂಬಿ ದರಗಳು ಹಿಂದಿನ ವರ್ಷ ಈ ಸಮಯುದಲ್ಲಿದ್ದುದರಿಂದ ಕಡಿಮೆಯಾಗಿದೆಯೆನ್ನಲಾಗಿದೆ. ಹಾಗೂ ಸದ್ಯ ದರ ಹೆಚ್ಚಳವಾಗುವ ಸೂಚನೆ ಕಾಣುತ್ತಿಲ್ಲವೆನ್ನಲಾಗಿದೆ. ಈ ವರ್ಷ ವಿಯೆಟ್ನಾಂ **400,000** ಟನ್ ಕಚ್ಚಾ ಗೋಡಂಬಿ ಉತ್ಪಾದಿಸುವ ನಿರೀಕ್ಷೆಯಿದೆಯೆನ್ನಲಾಗಿದೆ. **1.5** ಮಿಲಿಯನ್ ಟನ್ ಗಳು ಗೋಡಂಬಿ ಉತ್ಪಾದಕರಿಗೆ ಬೇಕಾಗಬಹುದೆನ್ನಲಾಗಿದೆ. ಆಫ್ರಿಕಾದ ಕಚ್ಚಾ ಗೋಡಂಬಿ ದರವೂ ಹಿಂದಿನ ವರ್ಷ ಈ ಸಮಯದಲ್ಲಿದ್ದುದರಿಂದ ಕಡಿಮೆಯಿದೆಯೆನ್ನಲಾಗಿದೆ. ಬೇಡಿಕೆಗಿಂತ ಅಧಿಕ ಜಾಗತಿಕ ಕಚ್ಚಾ ಗೋಡಂಬಿ ಉತ್ಪಾದನೆ ಹಾಗೂ ಪೂರೈಕೆಯಿಂದ ದರ ಇಳಿಕೆಯ ಹಾದಿಯೆನ್ನಲಾಗಿದೆ.